# ‘ತತ್ತ್ವಮಸಿ, ಶ್ವೇತಕೇತೋ’

## (ಛಾಂದೋಗ್ಯೋಪನಿಷತ್ತು)

ಸ್ವಾಮಿ ವೀರೇಶಾನಂದ

ಎರಡನೆಯ ಭಾಗ



ಶ್ವೇತಕೇತುವಿನ ತಂದೆ ಆರುಣಿಯು ತನ್ನ ಮಗನಿಗೆ ಉಪದೇಶ ಮಾಡುತ್ತಿದ್ದಾನೆ: ‘‘ಜೀವರೂಪದಿಂದ ಆತ್ಮನು ದೇಹವನ್ನು ಪ್ರವೇಶಮಾಡಿದನು ಎನ್ನುವುದನ್ನು ನಿನಗೆ ತಿಳಿಸಿಕೊಟ್ಟೆನು. ಮುಂದೆ ಏನಾಯಿತು ಎನ್ನುವುದನ್ನು ಕೇಳು’’ ಎಂದು ಅವನು ಹೇಳಿದನು.

‘‘ಜೀವಾತ್ಮನ ರೂಪದಿಂದ ಪ್ರವೇಶ ಮಾಡಿದ ಪರಮಾತ್ಮನು ನಾಮರೂಪಗಳನ್ನು ವ್ಯಕ್ತಪಡಿಸಿದನು. ಇದರರ್ಥ ಏನು? ವಿರಾಟ್ ಪುರುಷನ ದೇಹವನ್ನು ಮಾತ್ರವಲ್ಲದೆ, ದೇವತೆಗಳೇ ಮುಂತಾದವರ ದೇಹಗಳನ್ನು ಕೂಡ ಕೆರೆ, ಬಾವಿಗಳಲ್ಲಿ ಸೂರ್ಯ ಬಿಂಬವು ಪ್ರವೇಶಮಾಡಿದಂತೆ, ಜೀವಾತ್ಮವು ಪ್ರವೇಶ ಮಾಡಿತು. ತನ್ನ ಸಂಕಲ್ಪದಂತೆ, ‘ಇದು ಈ ಹೆಸರಿನದು’, ‘ಈ ರೂಪದ್ದು’ ಎಂದು ನಾಮರೂಪಗಳ ಅಭಿವ್ಯಕ್ತಿಯನ್ನು ಮಾಡಿತು. ಇದಲ್ಲದೆ ಈ ಎಲ್ಲ ದೇಹಗಳು ಮೂರು ಬಗೆಯಾಗಿವೆ. ಅವೆಂದರೆ ತೇಜಸ್ಸು, ಜಲ, ಅನ್ನ ಎಂದು. ಈ ಮೂರು ಭೂತಗಳು ಪ್ರತಿಯೊಂದು ದೇಹವನ್ನೂ ಸೃಷ್ಟಿಮಾಡುವ ಘಟಕಗಳು ಎಂದು ಇದರ ಅರ್ಥ. ಇದಲ್ಲದೆ ಈ ಜಗತ್ತಿನಲ್ಲಿರುವ ಎಲ್ಲವೂ ತೇಜಸ್ಸು, ಜಲ, ಅನ್ನ — ಈ ಮೂರು ಘಟಕಗಳಿಂದಲೇ ಆಗಿವೆ. ಈ ವಿಷಯವನ್ನು ಶ್ವೇತಕೇತುವಿಗೆ ಅವನ ತಂದೆಯು ವಿವರವಾಗಿ ರೂಪಕಗಳ ಮೂಲಕ ಹೀಗೆ ಉಪದೇಶಿಸುತ್ತಾನೆ:

ಅಗ್ನಿಯಲ್ಲಿಯೂ ಮೂರು ಘಟಕಗಳಿವೆ. ಅಗ್ನಿಯ ಕೆಂಪನೆಯ ರೂಪವು ತೇಜಸ್ಸಿನ ರೂಪವು. ಬಿಳಿಯ ರೂಪವು ಅಪ್ಪಿನ (ನೀರಿನ) ರೂಪವು. ಕಪ್ಪನೆಯ ರೂಪವು ಅನ್ನದ ರೂಪವು. ಹೀಗಾಗಿ ಅಗ್ನಿ ಎನ್ನುವ ಮೂಲವಸ್ತುವೇ ಇಲ್ಲ ಎಂದ ಹಾಗಾಯಿತು. ಅಗ್ನಿ ಎನ್ನುವುದು ಬರಿಯ ಹೆಸರು ಮಾತ್ರ. ತೇಜಸ್ಸು, ಅಪ್, ಅನ್ನ — ಈ ಮೂರು ರೂಪಗಳೇ ಸತ್ಯ.

ಆದಿತ್ಯನಲ್ಲಿ ಇರುವ ಕೆಂಪು ರೂಪವು ತೇಜಸ್ಸಿನ ರೂಪವು. ಬಿಳಿಯ ರೂಪವು ಅಪ್ಪಿನ (ನೀರಿನ) ರೂಪವು. ಕಪ್ಪಗಿರುವುದು ಅನ್ನದ ರೂಪವು. ಹೀಗಾಗಿ ಆದಿತ್ಯವೆಂಬ ಮೂಲವಸ್ತುವೇ ಇಲ್ಲ ಎಂದ ಹಾಗಾಯಿತು. ಆದಿತ್ಯವೆನ್ನುವುದು ಕೇವಲ ಹೆಸರು ಮಾತ್ರ. ಇದರಲ್ಲಿರುವ ತೇಜಸ್ಸು, ಅಪ್, ಅನ್ನ ಎಂಬ ಘಟಕಗಳೇ ಸತ್ಯವಾದುದು.

ಹೀಗೆ ಹಲವಾರು ನಿದರ್ಶನಗಳನ್ನು ಗುರುವು ನೀಡುತ್ತಾನೆ. ‘‘ಮಗೂ, ಈ ವಿದ್ಯೆಯು ನಮ್ಮ ಕುಟುಂಬದಲ್ಲಿ ಪರಂಪರಾಗತವಾಗಿ ಬಂದಿದ್ದು. ನಮ್ಮ ಪೂರ್ವಿಕರು ಸದ್ವಸ್ತುವಿನ ಜ್ಞಾನವುಳ್ಳವರು. ಹೀಗಾಗಿ ಅವರು ಸರ್ವಜ್ಞರೇ ಆಗಿದ್ದರು. ಮಗೂ, ನೀನೂ ಅವರಂತೆಯೇ ಮಹಾಮೇಧಾವಿಯಾಗಬೇಕು, ಆಧ್ಯಾತ್ಮಿಕ ಸುಸಂಪನ್ನನಾಗಬೇಕು, ತಿಳಿಯಿತೆ?’’

‘‘ಮಗೂ, ಈ ದೇಹದಲ್ಲಿರುವ ಮನಸ್ಸು ಎನ್ನುವುದು ಅನ್ನಮಯವಾದುದು. ಪ್ರಾಣವು ಆಪೋಮಯವಾದುದು. ಮಾತು ತೇಜೋಮಯವಾದುದು. ಹೀಗೆ ದೇಹದಲ್ಲಿರುವ ಎಲ್ಲ ಅಂಶಗಳೂ ಅನ್ನ, ಆಪ ಮತ್ತು ತೇಜಸ್ಸು — ಇವುಗಳಿಂದಲೇ ಆಗಿವೆ. ತಿಳಿಯಿತೆ?’’

ಶ್ವೇತಕೇತುವು ಈ ಉಪದೇಶದಲ್ಲಿ ಬಹಳ ಆಸಕ್ತನಾಗಿದ್ದನು. ‘‘ಭಗವಂತನು ನನಗೆ ಇನ್ನೂ ಹೇಳಿಕೊಡಬೇಕು’’ ಎಂದು ಕೇಳಿಕೊಂಡನು. ‘‘ಸೋಮ್ಯನೇ, ಹಾಗೆಯೇ ಆಗಲಪ್ಪಾ’’ ಎಂದು ತಂದೆಯು ಒಪ್ಪಿಕೊಂಡನು.

ಉದ್ದಾಲಕ ಆರುಣಿಯು ತನ್ನ ಪುತ್ರನಿಗೆ ಉಪದೇಶವನ್ನು ಮುಂದುವರೆಸುತ್ತಿದ್ದಾನೆ: ''ಸೋಮ್ಯ, ಜೀವರೂಪದಿಂದ ಪರಮಾತ್ಮನು ದೇಹಗಳನ್ನು ಪ್ರವೇಶಮಾಡಿರುತ್ತಾನಷ್ಟೇ. ಸ್ವಪ್ನ ಸಮಯದಲ್ಲಿ ಅವನು ಕೇವಲ ಮನೋಮಯನಾಗಿರುತ್ತಾನೆ. ಸ್ವಪ್ನಶರೀರವನ್ನು ಅವನು ಹೊಂದುತ್ತಾನೆ. ಸ್ವಪ್ನಾಂತದಲ್ಲಿ ಅಂದರೆ ಸುಷುಪ್ತಿಯಲ್ಲಿ ಅವನು ಸ್ವಪೀತನಾಗುತ್ತಾನೆ. ಸ್ವಪ್ನದಲ್ಲಿ ಅವಿದ್ಯಾ ಕಾಮಕರ್ಮಗಳಿಂದ ಕೂಡಿದ ಅವನು ತನ್ನ ಸ್ವರೂಪವನ್ನು ಕಂಡುಕೊಂಡಿರುವುದಿಲ್ಲ. ಸುಷುಪ್ತಿಯ ಅವಸ್ಥೆಯಲ್ಲಿ ಅವನು ತನ್ನ ನಿಜಸ್ವರೂಪವನ್ನೇ ಕಂಡುಕೊಳ್ಳುತ್ತಾನೆ. ಇದನ್ನೇ ಸ್ವಪೀತನಾಗುತ್ತಾನೆ ಎನ್ನುವುದು. ಇಲ್ಲಿ ಪುಣ್ಯ-ಪಾಪಗಳು ಅವನನ್ನು ತಟ್ಟುವುದಿಲ್ಲ; ಅವನು ಹೃದಯದ ಎಲ್ಲ ಶೋಕಗಳನ್ನು ಕೂಡ ದಾಟಿರುತ್ತಾನೆ. ಇದನ್ನೇ ಪರಮಾನಂದದ ಸ್ಥಿತಿ ಎನ್ನುವುದು. ಆದರೆ ಅದರ ಅರಿವು ಪುರುಷನಿಗೆ ಇರುವುದಿಲ್ಲ. ಅವನು ಇನ್ನೂ ಅಜ್ಞಾನದ ಆವರಣದಲ್ಲಿಯೇ ಇರುತ್ತಾನೆ.

''ಇದು ಹೇಗೆ ಆಗುತ್ತದೆ, ಎನ್ನುತ್ತೀಯೊ? ಅದಕ್ಕೆ ಕೆಲವು ಉದಾಹರಣೆಗಳನ್ನು ನೀಡುತ್ತೇನೆ. ಕೇಳು. ಒಂದು ಹಕ್ಕಿಯಿದೆ ಅಂದುಕೋ. ಅದು ಹಕ್ಕಿಗಳನ್ನು ಹೊಡೆಯುವವನ ದಾರಕ್ಕೆ ಸಿಕ್ಕಿ ಹಾಕಿಕೊಳ್ಳುತ್ತದೆ. ಈ ಬಂಧನವನ್ನು ತಪ್ಪಿಸಿಕೊಳ್ಳಲು ಅದು ಅಲ್ಲಿ ಇಲ್ಲಿ ಹಾರಾಡಲು ಆರಂಭಿಸುತ್ತದೆ. ಎಲ್ಲಿಯೂ ಆಶ್ರಯ ಸಿಕ್ಕದೆ, ಕಟ್ಟಕಡೆಗೆ ಕಟ್ಟಿದ ಜಾಗದಲ್ಲಿಯೇ ಬಂದು ನಿಂತುಕೊಳ್ಳುತ್ತದೆ. ಹೀಗೆಯೇ ಮನಸ್ಸೆಂಬ ಉಪಾಧಿಯನ್ನು ಹೊಂದಿರುವ ಜೀವಾತ್ಮನು ಅವಿದ್ಯಾಕಾಮಕರ್ಮಗಳ ವಶಕ್ಕೆ ಒಳಗಾಗುತ್ತಾನೆ. ಸುಖ ದುಃಖಗಳೆಂಬ ದಿಕ್ಕುಗಳಲ್ಲಿ, ಎಚ್ಚರ ಕನಸುಗಳೆಂಬ ಸ್ಥಿತಿಗಳಲ್ಲಿ ಅಲೆದಾಡುತ್ತಾನೆ. ಕಡೆಗೆ ತನ್ನ ಸ್ವರೂಪವನ್ನು ಸುಷುಪ್ತಿಯಲ್ಲಿ ಪಡೆದುಕೊಂಡರೂ, ಅಜ್ಞಾನದ ದೆಸೆಯಿಂದ ಅದನ್ನು ತಿಳಿಯದೆ ಇರುತ್ತಾನೆ. ಅಲ್ಲಿ ಅವನು ತನ್ನ ಪ್ರಾಣವನ್ನು ಮಾತ್ರವೇ ಆಶ್ರಯಿಸಿರುತ್ತಾನೆ. ಮನಸ್ಸು ಎನ್ನುವುದು ಪ್ರಾಣದಿಂದಲೇ ಬಂಧಿತವಾಗಿದೆ, ಅಲ್ಲವೆ? ಇದರರ್ಥ ಮನಸ್ಸು ಪ್ರಾಣವನ್ನೇ ಆಶ್ರಯಿಸಿದೆ ಎಂದು. ಹಸಿವು ಎನ್ನುವುದು ಮನುಷ್ಯನ ಒಂದು ಮೂಲ ಗುಣ. ಅವನು ಪ್ರಾಣಕ್ಕೆ ಕಟ್ಟುಬಿದ್ದಿರುವುರಿಂದ ಆಹಾರವನ್ನು ಸೇವಿಸಲೇಬೇಕು. ಹೀಗೆಂದೇ ಅವನನ್ನು **ಅಶಿಶಿಷತಿ** ಎಂದೂ ಕರೆಯುತ್ತಾರೆ. ಮನುಷ್ಯನ ದೇಹಕ್ಕೆ ಅನ್ನವೇ ಮೂಲ. ಅನ್ನದ ಮೂಲ ನೀರು. ನೀರಿನ ಮೂಲ ತೇಜಸ್ಸು. ಇದಕ್ಕೂ ಮೂಲವಾಗಿರುವುದೇ ಸದ್ವಸ್ತು ಎಂದು ಕರೆಯಲಾಗುವ ಆತ್ಮಸ್ವರೂಪ. ಇದೇ ಪರಮಾರ್ಥ ಸತ್ಯ. ಉಳಿದ ಭಾವನೆಗಳು, ಅಂದರೆ ನಾನು ದೇಹ, ನಾನು ಮನಸ್ಸು ಎಂಬ ಭಾವನೆಗಳೆಲ್ಲ ಸದ್ವಸ್ತುವಿನ ವಿಕಾರಗಳು ಮಾತ್ರ. ಅವು ಸದ್ವಸ್ತುವಿನ ಬೇರೆ ಬೇರೆ ಹೆಸರುಗಳು ಮಾತ್ರ. ಸದ್ವಸ್ತುವೊಂದೇ ಸತ್ಯ.

''ಶ್ವೇತಕೇತುವೇ, ಈ ಸ್ಥಾವರ-ಜಂಗಮಗಳಾಗಿ ವಿಭಾಗಗೊಂಡಿರುವ ಜೀವಿಗಳೆಲ್ಲವೂ ಸದ್ವಸ್ತುವಿನಿಂದಲೇ ಹುಟ್ಟಿಬಂದಿವೆ. ಅವುಗಳ ಅಸ್ತಿತ್ವಕ್ಕೂ ಸದ್ವಸ್ತುವೇ ಆಧಾರವಾಗಿದೆ. ಅಂದರೆ ಎಲ್ಲ ಜೀವರಾಶಿಗಳೂ ಸದ್ವಸ್ತುವನ್ನೇ ಆಶ್ರಯಿಸಿಕೊಂಡು ಇವೆ. ಅವೆಲ್ಲವೂ ತಮ್ಮ ಅಂತ್ಯವನ್ನು ಕೂಡ ಸದ್ವಸ್ತುವಿನಲ್ಲಿಯೇ ಕಂಡುಕೊಳ್ಳುತ್ತವೆ. ಕೊನೆಯ ಗತಿಯೂ ಸದ್ವಸ್ತುವಾದ ಬ್ರಹ್ಮವೇ. ಹೀಗಾಗಿ, ಓ ಶ್ವೇತಕೇತು, ನಿಜವಾಗಿಯೂ ಇರುವುದು ಬ್ರಹ್ಮವೇ.

''ಸಾಯುತ್ತಿರುವ ಮನುಷ್ಯನನ್ನು ನಿರೀಕ್ಷಿಸಿದಾಗಲೂ ಇದೇ ಸತ್ಯ ಹೊರಹೊಮ್ಮುತ್ತದೆ. ಮೊದಲು ಅವನ ಮಾತು ನಿಂತು ಹೋಗಿ, ಮನಸ್ಸಿನಲ್ಲಿ ಸೇರಿಹೋಗುತ್ತದೆ, ಮನಸ್ಸು ಕೂಡ ಸ್ತಬ್ಧವಾಗಿ ಪ್ರಾಣದಲ್ಲಿ ಲೀನವಾಗುತ್ತದೆ. ಪ್ರಾಣವು ತೇಜಸ್ಸಿನಲ್ಲಿ ಮಿಲಿತವಾಗುತ್ತದೆ. ತೇಜಸ್ಸು ಪರದೇವತೆಯಾದ ಆತ್ಮನಲ್ಲಿ ಲೀನವಾಗುತ್ತದೆ. ಇದೇ ಮನುಷ್ಯನು ಪರಮಾತ್ಮನಲ್ಲಿ ಲೀನವಾಗುವ ಕ್ರಮ. ಮಗೂ, ನಾನು ಈಗ ಪರಮರಹಸ್ಯವೊಂದನ್ನು ಉಪದೇಶಿಸುತ್ತೇನೆ. ಶ್ರದ್ಧೆಯಿಂದ ಕೇಳು.

''ಮಗೂ, ಸತ್ ಅಥವಾ ಸದ್ವಸ್ತುವಿನ ಬಗ್ಗೆ ನಾನು ವಿಶದವಾಗಿ ನಿನಗೆ ಹೇಳಿರುವೆ. ಇದೇ ಇಡೀ ಜಗತ್ತಿಗೆ ಆತ್ಮವಾಗಿದೆ (ಐತದಾತ್ಮ್ಯ). ಈ ಸತ್ತೆಂಬ ಆತ್ಮನಿಂದಲೇ ಈ ಜಗತ್ತೆಲ್ಲವೂ ಆತ್ಮ ಅಥವಾ ಸಾರವುಳ್ಳದ್ದಾಗಿದೆ. ಇದಕ್ಕೆ ಭಿನ್ನವಾದ ಸಂಸಾರಿ ಆತ್ಮ ಅಥವಾ ಜೀವಾತ್ಮ ಬೇರೊಬ್ಬನಿಲ್ಲ. ಇರುವುದು ಒಂದೇ ಆತ್ಮ. ಅದೇ ಸದ್ವಸ್ತುವೆಂಬ ಪರಮಾತ್ಮ.

**''ಐತದಾತ್ಮ್ಯಮಿದಂ ಸರ್ವಂ ತತ್ ಸತ್ಯಂ ಸ ಆತ್ಮಾ ತತ್ತ್ವಮಸಿ, ಶ್ವೇತಕೇತೋ ॥''**

'ಈ ಜಗತ್ತೆಲ್ಲ ಯಾವ ಆತ್ಮದಿಂದಲೇ ಆತ್ಮವಂತವಾಗಿರುವುದೋ, ಇಡೀ ಜಗತ್ತಿನ ಒಳಸ್ವರೂಪವಾಗಿರುವುದೋ, ಎಲ್ಲಕ್ಕೂ ಕಾರಣವಾದ ಸದ್ವಸ್ತು ಅಥವಾ ಬ್ರಹ್ಮವೆಂಬ ಆ ವಸ್ತುವೇ ಸತ್ಯವು. ಮಗೂ, ಶ್ವೇತಕೇತು, ತತ್ ತ್ವಮ್ ಅಸಿ — ಅದು ನೀನೇ ಆಗಿದ್ದೀಯೆ - ಆ ಸತ್ಯವು ನೀನೇ ಆಗಿರುತ್ತೀಯೆ.' ''

ಆಗ ಶ್ವೇತಕೇತುವು ಒಂದು ಪ್ರಶ್ನೆಯನ್ನು ಕೇಳುತ್ತಾನೆ: ''ಭಗವಂತನೇ, ನೀವು ಹೇಳಿದಿರಿ. ಪ್ರತಿದಿನವೂ ಜನರು ಸುಷುಪ್ತಿಯಲ್ಲಿ ಸದ್ವಸ್ತುವಿನ ಜೊತೆಗೆ ಒಂದಾಗುತ್ತಾರೆ ಎಂದು. ಇದು ಹೇಗೆ ಎಂದು ನನಗೆ ತಿಳಿಯಲಿಲ್ಲ. ಸುಷುಪ್ತಿಯಲ್ಲಿ ನಾವು ಸದ್ವಸ್ತುವಿನ ಜೊತೆಗೆ ಏಕೀಭಾವವನ್ನು ಪಡೆದುಕೊಂಡರೂ, ಅದರ ಅರಿವು ನಮಗೆ ಇರುವುದೇ ಇರುವುದಿಲ್ಲ. ಇದನ್ನು ದೃಷ್ಟಾಂತಗಳ ಮೂಲಕ ದಯವಿಟ್ಟು ಹೇಳಿಕೊಡಬೇಕು.''

ಶ್ವೇತಕೇತುವು ಕೇಳಿಕೊಂಡಂತೆಯೇ ಉದ್ದಾಲಕನು ಅನೇಕ ದೃಷ್ಟಾಂತಗಳನ್ನು ನೀಡುತ್ತಾನೆ:

''ಸೋಮ್ಯ, ಜೇನುನೊಣಗಳು ಜೇನುತುಪ್ಪವನ್ನು ತಯಾರಿಸುವ ವಿಧಾನ ನಿನಗೆ ಗೊತ್ತಿದೆಯಷ್ಟೇ. ಅವು ಅನೇಕ ಪುಷ್ಪಗಳ ರಸವನ್ನು ಒಂದುಗೂಡಿಸಿ, ಜೇನುತುಪ್ಪವನ್ನು ತಯಾರಿಸುತ್ತವೆ.



ಆ ಜೇನುತುಪ್ಪದಲ್ಲಿ ಆ ಎಲ್ಲ ಪುಷ್ಪಗಳ ರಸದ ಐಕ್ಯತೆಯನ್ನು ಕಾಣುತ್ತೇವೆ. ನಾನು ಈ ಹೂವಿನ ರಸವಾಗಿರುವೆನು, ನಾನು ಆ ಹೂವಿನ ರಸವಾಗಿರುವೆನು ಎಂಬ ಭೇದಬುದ್ಧಿ ಅಲ್ಲಿ ಕಾಣುವುದಿಲ್ಲ. ಹಾಗೆಯೇ ಜನಗಳಲ್ಲಿಯೂ ಕೂಡ. ಸದ್ವಸ್ತುವಿನಲ್ಲಿ ಐಕ್ಯಭಾವವನ್ನು ಹೊಂದಿರುವ ಜೀವಿಗಳದೂ ಅದೇ ಸ್ಥಿತಿ. ತಾವೆಲ್ಲ ಸದ್ವಸ್ತುವಿನಲ್ಲಿ ಸಂಪನ್ನರಾಗಿದ್ದೇವೆ ಎಂಬ ಅರಿವು ಅವರಿಗೆ ಇರುವುದಿಲ್ಲ. ಏಕೆಂದರೆ ಎಲ್ಲ ಬಗೆಯ ವ್ಯಕ್ತಿಗತ ಭಾವನೆಯೂ ಅವರಲ್ಲಿ ನಿರ್ಮೂಲವಾಗಿರುತ್ತದೆ. ಅವರೆಲ್ಲ ಸದ್ಭಾವವನ್ನೇ ಪಡೆದುಕೊಳ್ಳುತ್ತಾರೆ.

''ಹುಲಿ ಇರಬಹುದು, ಸಿಂಹವಿರಬಹುದು, ತೋಳವೋ, ಕಾಡುಹಂದಿಯೋ, ಹುಳವೋ, ಚಿಟ್ಟೆಯೋ, ಕಾಡುನೊಣವೋ, ಸೊಳ್ಳೆಯೋ — ಯಾವುದಾದರೂ ಇರಬಹುದು. ಅವೆಲ್ಲವೂ ಸದ್ವಸ್ತುವಿನೊಡನೆ ಐಕ್ಯಭಾವವನ್ನು ಸುಷುಪ್ತಿಯಲ್ಲಿ ಪಡೆದಾಗ, ಅದೇ ಆಗಿಬಿಡುತ್ತವೆ. ಶ್ವೇತಕೇತು, ಆ ಸದ್ವಸ್ತುವೇ ಇಡೀ ಜಗತ್ತಿನ ಆತ್ಮವಾಗಿದೆ. ಅದೇ ನೀನು ಕೂಡ ಆಗಿದ್ದೀಯೆ.''

ಶ್ವೇತಕೇತುವು ಇದನ್ನು ಕೇಳಿಸಿಕೊಂಡನು. ಈ ಗಹನವಾದ ವಿಷಯವನ್ನು ಇನ್ನೂ ಸ್ಪಷ್ಟಮಾಡಿಕೊಳ್ಳಲು ಇಚ್ಛಿಸಿದನು. ''ಭಗವಂತನು ಇನ್ನೂ ನನಗೆ ಉಪದೇಶ ಮಾಡಬೇಕು'' ಎಂದು ಪ್ರಾರ್ಥಿಸಿದನು.

ಅವನ ತಂದೆಯು ಇನ್ನೂ ಹಲವಾರು ದೃಷ್ಟಾಂತಗಳ ಮೂಲಕ **ತತ್ತ್ವಮಸಿ** ಮಹಾವಾಕ್ಯವನ್ನು ಮತ್ತೆ ಮತ್ತೆ ಉಪದೇಶಿಸಿದನು. ಇವುಗಳಲ್ಲಿ ಕೆಲವು ಆಸಕ್ತಿಕರವಾದ ದೃಷ್ಟಾಂತಗಳನ್ನು ನೋಡೋಣ:



''ಸೋಮ್ಯನೇ, ಪೂರ್ವದಿಕ್ಕಿನ ನದಿಗಳು ಪೂರ್ವದಿಕ್ಕಿನ ಸಮುದ್ರವನ್ನು ಹೋಗಿ ಸೇರುತ್ತವೆ. ಪಶ್ಚಿಮದಿಕ್ಕಿನ ನದಿಗಳು ಪಶ್ಚಿಮದಿಕ್ಕಿನ ಸಮುದ್ರವನ್ನು ಹೋಗಿ ಸೇರುತ್ತವೆ. ಈ ಎಲ್ಲ ನದಿಗಳೂ ಸಮುದ್ರವೇ ಆಗಿಬಿಡುತ್ತವೆ. ಸಮುದ್ರದಲ್ಲಿ ಈ ನದಿ, ಆ ನದಿ ಎಂಬ ಭಿನ್ನ ಭಾವನೆಗಳೆಲ್ಲವೂ ಹೋಗಿಬಿಡುತ್ತವೆ. ಇದೇ ಐಕ್ಯಭಾವ. ಸದ್ವಸ್ತುವಿನಲ್ಲಿ ಐಕ್ಯಭಾವವನ್ನು ಹೊಂದಿರುವ ಜೀವಿಗಳದೂ ಅದೇ ಸ್ಥಿತಿ. ತಾವೆಲ್ಲ ಸದ್ವಸ್ತುವಿನಲ್ಲಿ ಸಂಪನ್ನರಾಗಿದ್ದೇವೆ ಎಂಬ ಅರಿವು ಅವರಿಗೆ ಇರುವುದಿಲ್ಲ. ಏಕೆಂದರೆ ಎಲ್ಲ ಬಗೆಯ ವ್ಯಕ್ತಿಗತಭಾವನೆಯೂ ಅವರಲ್ಲಿ ನಿರ್ಮೂಲವಾಗಿರುತ್ತದೆ. ಅವರೆಲ್ಲ ಸದ್ಭಾವವನ್ನೇ ಪಡೆದುಕೊಳ್ಳುತ್ತಾರೆ. ಶ್ವೇತಕೇತು, ಆ ಸದ್ವಸ್ತುವೇ ಇಡೀ ಜಗತ್ತಿನ ಆತ್ಮವಾಗಿದೆ. ಅದೇ ನೀನು ಕೂಡ ಆಗಿದ್ದೀಯೆ.''

ಹೀಗೆ ಒಂದೆರಡು ದೃಷ್ಟಾಂತಗಳ ಮೂಲಕ **ತತ್ತ್ವಮಸಿ** ತತ್ತ್ವವನ್ನು ಉದ್ದಾಲಕನು ವಿವರಿಸಿದನು. ನಂತರ ಶ್ವೇತಕೇತುವಿಗೆ, ''ಮಗೂ ಆಲದ ಹಣ್ಣನ್ನು ತೆಗೆದುಕೊಂಡು ಬಾ'' ಎಂದನು. ಶ್ವೇತಕೇತುವು, ''ಇದೋ ಭಗವಂತನೇ, ತಂದಿದ್ದೇನೆ'' ಎಂದನು.



ಉದ್ದಾಲಕ : ಮಗೂ ನಿನಗೆ ಏನು ಕಾಣಿಸುತ್ತದೆ?

ಶ್ವೇತಕೇತು : ಭಗವಾನ್, ಚಿಕ್ಕ ಚಿಕ್ಕ ಬೀಜಗಳು ಕಾಣಿಸಿಕೊಳ್ಳುತ್ತವೆ.

ಉದ್ದಾಲಕ : ಅವುಗಳಲ್ಲಿ ಒಂದನ್ನು ಒಡೆಯುತ್ತೀಯಾ?

''ಆಯಿತು'' ಎಂದು ಹೇಳಿದ ಶ್ವೇತಕೇತವು ಬೀಜವನ್ನು ಒಡೆದನು.

ಉದ್ದಾಲಕ: ಮಗೂ, ಈ ಬೀಜದ ಒಳಗೆ ನಿನಗೆ ಏನು ಕಾಣಿಸುತ್ತದೆ?

ಶ್ವೇತಕೇತು: ಏನೂ ಇಲ್ಲ ಭಗವಂತನೇ.

ಉದ್ದಾಲಕ: ಬೀಜದಲ್ಲಿ ಯಾವ ಸೂಕ್ಷ್ಮವಾದ ವಸ್ತುವು ನಿನ್ನ

ಕಣ್ಣಿಗೆ ಕಾಣುವುದಿಲ್ಲವೋ, ಆ ಸೂಕ್ಷ್ಮವಸ್ತುವಿನಿಂದಲೇ ದೊಡ್ಡದಾಗಿರುವ ಆಲದ ಮರವು ಬೆಳೆದುನಿಂತಿದೆ. ಸೋಮ್ಯ, ನನ್ನ ಈ ಉಪದೇಶದಲ್ಲಿ ಶ್ರದ್ಧೆಯಿಡು. ಇದೇ ರೀತಿ ಸೂಕ್ಷ್ಮವಾದ ಸದ್ವಸ್ತುವಿನಿಂದಲೇ ಇಡೀ ಜಗತ್ತು ಒಡಮೂಡಿದೆ. ಆ ಸದ್ವಸ್ತುವೇ ಇಡೀ ಜಗತ್ತಿನ ಆತ್ಮವಾಗಿದೆ. ಅದೇ ನೀನು ಕೂಡ ಆಗಿದ್ದೀಯೆ.

ಶ್ವೇತಕೇತುವಿಗೆ ಇನ್ನೂ ಶಂಕೆ. ಎಲ್ಲವೂ ಸದ್ವಸ್ತುವಾದರೆ ಅದನ್ನು ನಾನು ಕಾಣುವುದಿಲ್ಲವಲ್ಲ ಎಂದು. ಇದನ್ನು ನಿವಾರಿಸಲು ಅವನ ತಂದೆಯು ಹೀಗೆ ಪ್ರಯತ್ನಿಸುತ್ತಾನೆ:

ಉದ್ದಾಲಕ: ಮಗೂ, ಇಂದು ರಾತ್ರಿ ಉಪ್ಪನ್ನು ನೀರಿನ ಗಡಿಗೆಯೊಂದರಲ್ಲಿ ಹಾಕಿ, ಬೆಳಗ್ಗೆ ಬಂದು ನನ್ನನ್ನು ಕಾಣು.

ಶ್ವೇತಕೇತು : ಹಾಗೆಯೇ ಆಗಲಿ, ಭಗವಂತನೇ.

ಬೆಳಗಿನ ಹೊತ್ತು ಆಯಿತು. ಉದ್ದಾಲಕನು ಮಗನಿಗೆ ಆದೇಶವಿತ್ತನು.

ಉದ್ದಾಲಕ: ಮಗೂ, ನಿನ್ನೆ ನೀರಿನಲ್ಲಿ ಉಪ್ಪು ಹಾಕಿದ್ದೆಯಲ್ಲ, ಆ ಉಪ್ಪನ್ನು ತೆಗೆದುಕೊಂಡು ಬಾ.

ಶ್ವೇತಕೇತುವು ನೀರಿನ ಪಾತ್ರೆಯನ್ನೆಲ್ಲ ತಡಕಾಡಿದನು. ಅಲ್ಲಿ ಉಪ್ಪು ಅವನಿಗೆ ಕಾಣಿಸಲೇ ಇಲ್ಲ.

ಉದ್ದಾಲಕ: ಮಗೂ, ಈಗ ನೀರಿನ ಮೇಲುಗಡೆ ಸ್ವಲ್ಪ ಕುಡಿ. ಹೇಗಿದೆ?

ಶ್ವೇತಕೇತು : ಉಪ್ಪು ಉಪ್ಪಾಗಿದೆ, ಭಗವಂತನೇ.

ಉದ್ದಾಲಕ: ಈಗ ಕೆಳಗಡೆಯಿಂದ ಸ್ವಲ್ಪ ಕುಡಿ. ಹೇಗಿದೆ?

ಶ್ವೇತಕೇತು : ಉಪ್ಪುಉಪ್ಪಾಗಿದೆ, ಭಗವಂತನೇ.

ಉದ್ದಾಲಕ: ಆಯಿತು, ನೀರನ್ನು ಚೆಲ್ಲಿ ನನ್ನ ಬಳಿಗೆ ಬಾ.

ಶ್ವೇತಕೇತುವು ವಾಪಸ್ಸು ಬಂದ ಮೇಲೆ ಗುರುವು ಕೇಳಿದನು:

ಉದ್ದಾಲಕ: ಮಗೂ ನೀರಿನಲ್ಲಿ ಉಪ್ಪು ಇದೆ ತಾನೇ. ಅದು ನಿನ್ನ ಕಣ್ಣಿಗೆ ಮಾತ್ರ ಕಾಣಲಿಲ್ಲ. ಉಪ್ಪು ಇದೆ ಎನ್ನುವುದರಲ್ಲಿ ನಿನಗೆ ಯಾವ ಸಂದೇಹವೂ ಇಲ್ಲ ತಾನೆ? ಅದೇ ರೀತಿ, ಮಗೂ, ಸದ್ವಸ್ತುವು ನಮ್ಮ ಆತ್ಮರೂಪದಲ್ಲಿ ಇರುವುದು. ಈ ಸದ್ವಸ್ತುವೇ ಈ ಜಗತ್ತಿನ ಆತ್ಮವೂ ಕೂಡ. ಅದು ನೀನೇ ಆಗಿರುವೆ, ಶ್ವೇತಕೇತುವೆ.

‘‘ಮಗೂ, ಈ ಸದ್ವಸ್ತುವನ್ನು ಗುರುವಿನ ಉಪದೇಶದ ಮೂಲಕವೇ ತಿಳಿಯಬೇಕು. ಬೇರೆ ಮಾರ್ಗವಿಲ್ಲ. ಒಬ್ಬ ವ್ಯಕ್ತಿಯನ್ನು ಕಳ್ಳರು ಗಾಂಧಾರದೇಶದಿಂದ ತಂದು ಎಲ್ಲಿಯೋ ಕಾಡಿನಲ್ಲಿ ಕಣ್ಣು ಕಟ್ಟಿ ಬಿಟ್ಟುಬಿಟ್ಟರು. ಅವನು ಎಲ್ಲ ದಿಕ್ಕುಗಳಲ್ಲಿ ತಿರುಗಾಡುತ್ತ, ನನ್ನ ಕಣ್ಣನ್ನು ಕಟ್ಟಿಹಾಕಿದ್ದಾರೆ ಎಂದು ಕಿರುಚಿಕೊಳ್ಳುತ್ತಿದ್ದನು. ಒಬ್ಬ ದಯಾಳು ವ್ಯಕ್ತಿಯು ಅವನ ಕಣ್ಣಿನ ಕಟ್ಟನ್ನು ಬಿಚ್ಚಿದನು.



ಗಾಂಧಾರ ದೇಶದ ಮಾರ್ಗವನ್ನು ಹೇಳಿಕೊಟ್ಟನು. ಅದನ್ನು ಅನುಸರಿಸುತ್ತ ಅವನು ಊರಿಂದೂರಿಗೆ ಹೋಗಿ, ಮಾರ್ಗವನ್ನು ವಿಚಾರಿಸುತ್ತ, ಕಡೆಗೆ ತನ್ನ ಊರನ್ನು ತಲುಪಿದನು. ಇದರಂತೆಯೇ ಗುರುವಿನ ಉಪದೇಶವನ್ನು ಚೆನ್ನಾಗಿ ಕೇಳಿಸಿಕೊಳ್ಳಬೇಕು. ಹಾಗೆಯೇ ಸ್ವಬುದ್ಧಿಯಿಂದ ತರ್ಕಬದ್ಧವಾಗಿ ವಿಚಾರ ಮಾಡಬೇಕು. ಆಗ ಮಾತ್ರ ಕಡೆಯಲ್ಲಿ ಈ ಬ್ರಹ್ಮವಿದ್ಯೆಯನ್ನು ಅರಿತುಕೊಳ್ಳಲು ಸಾಧ್ಯ. **ಆಚಾರ್ಯವಾನ್ ಪುರುಷೋ ವೇದ** – ಗುರುವನ್ನು ಹೊಂದಿದವನು ಮಾತ್ರವೇ ಈ ವಿಚಾರವನ್ನು ತಿಳಿದುಕೊಳ್ಳಲು ಸಾಧ್ಯ. ಮಗೂ, ಸದ್ವಸ್ತುವು ನಮ್ಮ ಆತ್ಮರೂಪದಲ್ಲಿ ಇರುವುದು. ಈ ಸದ್ವಸ್ತುವೇ ಈ ಜಗತ್ತಿನ ಆತ್ಮವೂ ಕೂಡ. ಅದು ನೀನೇ ಆಗಿರುವೆ, ಶ್ವೇತಕೇತುವೆ.’’

ಇನ್ನೂ ಒಂದೆರಡು ದೃಷ್ಟಾಂತಗಳ ಮೂಲಕ ವಿಷಯವನ್ನು ಉದ್ದಾಲಕನು ವಿಶದೀಕರಿಸಿದನು. ಕಡೆಯಲ್ಲಿ ಶ್ವೇತಕೇತುವು **ತತ್ತ್ವಮಸಿ** ಮಹಾವಾಕ್ಯದ ಮರ್ಮವನ್ನು ಅರಿತುಕೊಂಡನು. ತನ್ನ ಜೀವನವನ್ನು ಕೃತಕೃತ್ಯವನ್ನಾಗಿ ಮಾಡಿಕೊಂಡನು.



ಶಿಷ್ಯ : ಎಲ್ಲರಿಗೂ ಆಸೆಗಳಿಂದ ಮುಕ್ತರಾಗಲು ಸಾಧ್ಯವೆ?

ಶ್ರೀಮಾತೆ: ಎಲ್ಲರಿಗೂ ಸಾಧ್ಯವಾಗಿದ್ದರೆ ಇಡೀ ಸೃಷ್ಟಿ ನಿಂತುಹೋಗುವುದು. ಎಲ್ಲರಿಗೂ ಸಾಧ್ಯವಿಲ್ಲದ್ದರಿಂದಲೇ ಸೃಷ್ಟಿ ಮುಂದುವರಿಯುತ್ತಿದೆ, ಮತ್ತೆ ಮತ್ತೆ ಅವರು ಜನ್ಮವೆತ್ತಿ ಬರುತ್ತಿದ್ದಾರೆ.. ಆಸೆಗಳು ಇಲ್ಲದಾಗ ಮಾತ್ರ ಮತ್ತೆ ಜನ್ಮವಿರಲಾರದು. ಬೇರೆ ಯಾವುದರಿಂದಲೂ ಸಾಧ್ಯವಿಲ್ಲ. ಒಬ್ಬನಿಗೆ ಇದು ಕೊನೆಯ ಜನ್ಮವಾಗಿದ್ದರೂ, ಆಸೆಗಳು ಮುಗಿಯದಿದ್ದರೆ ಅದರಿಂದ ಏನು ಲಾಭವಾದೀತು?

**ಶ್ರೀಶಾರದಾದೇವಿ ವಚನವೇದದಿಂದ** *(ಪು.೧೮೦)*